# ಗ್ರಂಥಸಂಪಾದನಾ ಕ್ಷೇತ್ರಕ್ಕೆ ವೈ. ಸಿ. ಭಾನುಮತಿಯವರ ಜನಪದೀಯ ಕೊಡುಗೆ

**ಮಾನಸ ಎಂ.**

ಸಂಶೋಧನಾರ್ಥಿ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Received: 22-06-2024 ; Acepted: 10-07-2024 ; Published: 11-08-2024**

**DOI: https://doi.org/10.5281/zenodo.13284031**

**ABSTRACT:**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೃಜನಶೀಲ ಸಾಹಿತ್ಯಕ್ಕೆ ಹೆಚ್ಚು ಒತ್ತುಕೊಡುವ ಕಾಲದಲ್ಲಿ ಗ್ರಂಥಸಂಪಾದನ ಕ್ಷೇತ್ರದ ಆಲಸ್ಯ ಕಾಣಬಹುದು. ಇಂತಹ ಆಲಸ್ಯತನಕ್ಕೆ ಈಡಾಗಬಹುದಾದಂತಹ ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಸೃಜನಶೀಲ ಸಾಹಿತ್ಯಕ್ಕಿಂತ ಗ್ರಂಥಸಂಪಾದನಾ ಕ್ಷೇತ್ರ ಮುಖ್ಯವೆಂದು ಭಾವಿಸಿ ಹಲವಾರು ಪ್ರಾಚೀನ ಹಳಗನ್ನಡ ಕೃತಿಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪರಿಷ್ಕರಿಸಿ, ಪ್ರಕಟಣೆ ಮಾಡಿದಂತಹ ಹಲವಾರು ವಿದ್ವಾಂಸರ ಪಟ್ಟಿ ಇದೆ. ಇಂತಹ ವಿದ್ವಾಂಸರಲ್ಲಿ ಅದರಲ್ಲೂ ಮಹಿಳಾ ಗ್ರಂಥಸಂಪಾದಕರ ಸಾಲಿನಲ್ಲಿ ವೈ.ಸಿ. ಭಾನುಮತಿ ಅವರು ಪ್ರಮುಖವಾಗಿ ಕಾಣಿಸಿಕೊಳ್ಳುತ್ತಾರೆ. ಭಾನುಮತಿಯವರು ಹಳಗನ್ನಡ ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಹಾಗೂ ಸಂಶೋಧನೆಗೆ ಸಂಬಂಧಿಸಿದಂತೆ ಒಟ್ಟು 50ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಭಾನುಮತಿಯವರ ಆಸಕ್ತಿ ಜನಪದ ಕ್ಷೇತ್ರ. ಇವರು ಜನಪದ ಕ್ಷೇತ್ರದಲ್ಲಿ ನಡೆಸಿದ ಸಂಪಾದನೆಯನ್ನು ಇವರ ಕೃತಿಗಳಲ್ಲಿ ವ್ಯಕ್ತವಾಗಿರುವ ಸಾಂಸ್ಕೃತಿಕ ಚಹರೆಯನ್ನು ಕ್ಷೇತ್ರಕಾರ್ಯದ ಮೂಲಕ, ವಕ್ತೃಗಳ ಮೂಲಕ ವಿಷಯ ಸಂಪಾದನೆಮಾಡಿ ದಾಖಲಿಸಿ, ಪ್ರಕಟಿಸಿರುವುದನ್ನು ಗುರುತಿಸಬಹುದಾಗಿದೆ. ಇದರಿಂದ ಓದುಗರಿಗೆ ಜನಪದ ಕ್ಷೇತ್ರ, ಸಂಪಾದನಾ ಕ್ಷೇತ್ರದ ಮಹತ್ವ ತಿಳಿಯುತ್ತದೆ.

**KEYWORDS:**

ವೈ.ಸಿ. ಭಾನುಮತಿ, ಗ್ರಂಥಸಂಪಾದನೆ, ಜನಪದಸಾಹಿತ್ಯ, ವಕ್ತೃಗಳ ವಿವರ, ಸಾಂಸ್ಕೃತಿಕ ಅಂಶ.

ಭಾನುಮತಿ ಅವರು ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನ ಯಮಸಂಧಿಯಲ್ಲಿ 1953 ಜನವರಿ 14 ರಂದು ಜನಿಸಿದ್ದಾರೆ. ತಂದೆ-ವೈ.ಬಿ. ಚೆನ್ನೇಗೌಡ, ತಾಯಿ-ಎಚ್.ಎಸ್. ಜಯಮ್ಮ. ಭಾನುಮತಿಯವರ ಪ್ರಾಥಮಿಕ ಶಿಕ್ಷಣ ಯಮಸಂಧಿಯಲ್ಲಿ, ಪ್ರೌಢಶಿಕ್ಷಣ ಬೇಲೂರಿನಲ್ಲಿ, ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ವಿಜ್ಞಾನ ಪದವಿ ನಂತರ ಮಂಗಳೂರು ವಿ.ವಿ. ಯಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ನಂತರದಲ್ಲಿ 1975ರಲ್ಲಿ ಮೈಸೂರು ಮಾನಸ ಗಂಗೋತ್ರಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನಾ ಸಹಾಯಕರಾಗಿ 38 ವರ್ಷಗಳು ತಮ್ಮನ್ನು ಸಂಶೋಧನಾ ಕೆಲಸಗಳಿಗೆ ತೊಡಗಿಸಿಕೊಂಡು 2014ರ ಜನವರಿ 31ರಂದು ನಿವೃತ್ತಿಯಾಗಿದ್ದಾರೆ. ಮಹಿಳಾ ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಡಿ.

ಚಂಪಾಬಾಯಿಯಿಂದ ಹಿಡಿದು ಭಾನುಮತಿಯವರವರೆಗೂ ಅನೇಕ ಗ್ರಂಥಸಂಪಾದಕಿಯರಿದ್ದಾರೆ. ಆದರೆ ಭಾನುಮತಿ ಅವರು ತಮ್ಮ ಸಾಧನೆಯಿಂದ ಅಗ್ರಪಂಕ್ತಿಯಲ್ಲಿ ನಿಲ್ಲುವಂತಹ ವ್ಯಕ್ತಿತ್ವದವರು.

ಭಾನುಮತಿ ಅವರು ಹಳಗನ್ನಡ ಗ್ರಂಥಸಂಪಾನೆ ಕುರಿತು 36 ಕೃತಿಗಳನ್ನು, ಜಾನಪದಸಾಹಿತ್ಯ ಸಂಪಾದನೆ-11 ಕೃತಿಗಳು, ಸಂಶೋಧನಾ ಲೇಖನಗಳ ಕೃತಿಗಳು-7, ಜೊತೆಗೆ ಶಿಶುಸಾಹಿತ್ಯ, ಇತರೆ ಸಾಹಿತ್ಯ ಕುರಿತು ಸಂಪಾದನೆ, ಸಂಶೋಧನೆಯನ್ನು ಮಾಡುವುದರ ಮೂಲಕ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಭಾನುಮತಿ ಅವರು ಯಾವೊಂದು ಧರ್ಮಕ್ಕೆ ಅಂಟಿಕೊಳ್ಳದೆ ಹಳಗನ್ನಡ ಕೃತಿಗಳ ಸಂಪಾದನೆಯಲ್ಲಿ ಜೈನ, ವೀರಶೈವ, ವೈದಿಕ ಧರ್ಮಕ್ಕೆ ಸಂಬಂಧಿಸಿದ ಕೃತಿಗಳನ್ನು ಸಂಪಾದಿಸಿದ್ದಾರೆ. ಭಾನುಮತಿಯವರಿಗೆ ವಿಶೇಷವಾಗಿ ಜನಪದ ಸಾಹಿತ್ಯದ ಮೇಲಿನ ಆಸಕ್ತಿ ಹೆಚ್ಚು. ಇದರಿಂದ ಹಳಗನ್ನಡ ಕೃತಿಗಳ ಸಂಪಾದನೆಯಲ್ಲಿ ಚಾರಿತ್ರಿಕ ಆಕರವಾಗಿ ಕೈಫಿಯತ್ತು, ಶಾಸನಗಳನ್ನು ಬಳಸಿಕೊಂಡಿದ್ದಾರೆ. ಪ್ರಸ್ತುತ ಲೇಖನದಲ್ಲಿ ಭಾನುಮತಿಯವರ ಜನಪದ ಸಾಹಿತ್ಯ ಸಂಪಾದನೆಯ ಕುರಿತು ಚರ್ಚಿಸಲಾಗಿದೆ. ಇಬ್ಬೀಡಿನ ಜನಪದ ಕತೆಗಳು, ಪುಟ್ಟಿಮಲ್ಲಿಗೆ ಹಿಡಿತುಂಬ, ಜಾನಪದ ಭಿತ್ತಿ, ಜಾನಪದ ಚಹರೆ, ಮಲೆನಾಡು ಶೈವ ಒಕ್ಕಲಿಗರು, ಜಾನಪದೀಯ ಅಧ್ಯಯನ, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಜಾನಪದೀಯ ನೆಲೆಗಳು, ಜಾನಪದ ಆಂತರ್ಯ, ಮಕ್ಕಳ ಹಾಡುಗಳು, ಜಾನಪದ ದೇವರ ಹಾಡುಗಳು, ಜನಪದ ಅಡುಗೆ, ಹೊಳಲು ಅಣ್ಣಯ್ಯಗೌಡರ ಚಂದ್ರಹಾಸನ ಕಥೆ ಇವು ಜಾನಪದ ಸಾಹಿತ್ಯಕ್ಕೆ ಸಂಬಧಿಸಿದ ಸಂಪಾದಿತ ಕೃತಿಗಳಾಗಿವೆ.

“ಜನಪದ ಸಾಹಿತ್ಯವು ಶಿಷ್ಟಕವಿಯ ರಚನೆಯ ಹಾಗೆ ಒಬ್ಬ ವ್ಯಕ್ತಿ ಮತ್ತು ಒಂದು ಕಾಲಘಟ್ಟದ ದಾಖಲೆಯಾಗಿರುವುದಿಲ್ಲ. ಅನೇಕ ವ್ಯಕ್ತಿ ಮತ್ತು ಕಾಲಗಳ ಪುನಸೃಷ್ಟಿಯಾಗಿ ಮುಂದುವರೆಯುತ್ತದೆ. ಇಲ್ಲಿ ಪಠ್ಯ ಎಂಬುದು ಒಂದು ನಂಬಿಕೆ ಅಥವಾ ಗ್ರಹಿಕೆ ಅದರ ವಿವರ-ವಿಸ್ತಾರವೆ ನಿಜವಾದ ಕೃತಿ-ಆಗಿರುತ್ತದೆ.”[1] ಎಂಬುದು ಭಾನುಮತಿ ಅವರ ಜನಪದ ಸಾಹಿತ್ಯ ಸಂಪಾದನ ಆಶಯ ಆಗಿದೆ.

**ಇಬ್ಬೀಡಿನ ಜನಪದ ಕತೆಗಳು:** ಈ ಕೃತಿಯನ್ನು ವೈ.ಸಿ. ಭಾನುಮತಿ ಅವರು 1989ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ 21 ಜಾನಪದ ಕತೆಗಳಿವೆ. ಈ ಸಂಕಲನದ ಕತೆಗಳನ್ನು ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಇಬ್ಬೀಡು ಗ್ರಾಮದಲ್ಲಿ ಸಂಗ್ರಹಿಸಿದ್ದಾರೆ. ಇಬ್ಬೀಡು ಒಂದು ಪ್ರಾಚೀನ ಗ್ರಾಮ. ಈ ಕೃತಿಯಲ್ಲಿ ಕತೆಗಳನ್ನು ಹೇಳಿರುವ ಕತೆಗಾರರು ಅಥವಾ ಅವರ ಪೂರ್ವಜರು ಈ ಊರಿಗೆ ವಲಸೆ ಬಂದಿರುವುದನ್ನು ತಿಳಿಸಲಾಗಿದೆ. ಪ್ರಸ್ತುತ ಸಂಕಲನದಲ್ಲಿ ಕತೆಗಳು ಪ್ರಾಣಿ ಆಧಾರಿತ, ಪುರಾಣ ಆಧಾರಿತ ನೀತಿಕಥೆಗಳಾಗಿವೆ. ಭಾನುಮತಿ ಅವರು ಇಲ್ಲಿ ಕಥೆಗಳ ಜೊತೆಗೆ ರೂಪಾಂತರಗಳನ್ನು ಚರ್ಚಿಸಿರುವುದು ಒಂದು ವಿಶಿಷ್ಟವಾಗಿದೆ. ಉದಾ-ರೂಪವತಿ ಕಥೆ. ಈ ಸಂಕಲನದ ಕತೆಗಳಲ್ಲಿ ಸಾಂಸ್ಕೃತಿಕ ಅಂಶವನ್ನು, ಶಿಷ್ಟ ಪದಗಳು, ಆಂಗ್ಲ ಶಬ್ಧಗಳು ಬಳಕೆಗೊಂಡಿರುವುದನ್ನು ಗುರುತಿಸಿದ್ದಾರೆ. ಈ ಸಂಕಲನದ ಕುರಿತು ಹಾ.ಮಾ. ನಾಯಕರು “ಕಥಾವರ್ಗಗಳ ಅಧ್ಯಯನಕ್ಕೆ,

ಸಾಂಸ್ಕೃತಿಕ ವಿಶ್ಲೇಷಣೆಗೆ ತೌಲನಿಕ ಮಾರ್ಗದಲ್ಲಿ ಇವುಗಳಿಂದ ಅಪಾರ ನೆರವು ಒದಗುತ್ತದೆ. ಜನಪದ ಕಥೆಗಳ ಸಂಗ್ರಹಗಳ ಪ್ರಕಟಣೆಗಳ ಮಾರ್ಗದಲ್ಲಿ ನಿಮ್ಮ ಸಂಕಲನ ಒಂದು ಕಿಲೋಮೀಟರ್ ಕಲ್ಲು. ಇದೊಂದು ಹೊಸ ಅಧ್ಯಾಯವನ್ನು ಆರಂಬಿಸುತ್ತದೆ."[2] ಎಂದು ತಿಳಿಸಿದ್ದಾರೆ. ಈ ಸಂಕಲನಕ್ಕೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪುಸ್ತಕ ಬಹುಮಾನ, ಗುಂಡ್ಮಿ ಚಂದ್ರಶೇಖರ ಐತಾಳ ಜಾನಪದ ಪ್ರಶಸ್ತಿ ಬಂದಿದೆ. ಹಾಗೂ ಈ ಕೃತಿಯು 1991-94 ರವರೆಗೆ ಕಲಬುರ್ಗಿ ವಿಶ್ವವಿದ್ಯಾಲಯದ ಪಠ್ಯ ಪುಸ್ತಕವಾಗಿತ್ತು.

**ಮಲೆನಾಡು ಶೈವ ಒಕ್ಕಲಿಗರು ಜಾನಪದೀಯ ಅಧ್ಯಯನ:** ಕೃತಿಯನ್ನು 1994ರಲ್ಲಿ ಪ್ರಕಟಿಸಿದ್ದಾರೆ. ಇದು ಮಲೆನಾಡು ಶೈವ ಒಕ್ಕಲಿಗರ ಸಮುದಾಯ ನಂಬಿಕೆ, ಆಚರಣೆ ಹಾಗೂ ಅವರ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿದೆ. ಈ ಕೃತಿಯಲ್ಲಿ ಶೈವ ಒಕ್ಕಲಿಗರ ಅಧ್ಯಯನವು ಸಾಂಸ್ಕೃತಿಕ ಹಾಗೂ ಜಾನಪದೀಯ ನೆಲೆಯಿಂದ ರೂಪುಗೊಂಡಿದ್ದು ಮೌಖಿಕ ಅಂಶಗಳನ್ನು ಆಧರಿಸಿ ಸಾಂಸ್ಕೃತಿಕ ಶಿಸ್ತಿನ ಹಿನ್ನೆಲೆಯಲ್ಲಿ ಈ ಜನಾಂಗದ ವಿವಿಧ ಆಚರಣೆಗಳನ್ನು ವಿಶ್ಲೇಷಿಸಿದ್ದಾರೆ. ಮಲೆನಾಡು ಶೈವ ಒಕ್ಕಲಿಗರ ಜನಾಂಗಿಕ ಹಿನ್ನೆಲೆ, ಶಾಸನಗಳಲ್ಲಿ ಒಕ್ಕಲಿಗರು, ಜನನ-ಮರಣ, ವಿವಾಹ, ಹಬ್ಬ-ಹರಿದಿನಗಳು, ಭೇಟೆ, ಬೇಸಾಯ, ಅಡುಗೆ, ಸಂಪ್ರದಾಯ ಸಂಬಂಧದ ವಿವರಗಳನ್ನೆಲ್ಲ ಭಾನುಮತಿ ಅವರು ಸಂಗ್ರಹಿಸಿದ್ದಾರೆ. ಪ್ರಸ್ತುತ ಕೃತಿಯು ಚಿಕ್ಕಮಂಗಳೂರು ಮತ್ತು ಮೂಡಿಗೆರೆ ತಾಲ್ಲೂಕು, ಹಾಸನ ಜಿಲ್ಲೆಯ ಸಕಲೇಶಪುರ ಹಾಗೂ ಬೇಲೂರು ತಾಲ್ಲೂಕುಗಳು ಮತ್ತು ಕೊಡಗು ಜಿಲ್ಲೆಯ ಸೋಮವಾರಪೇಟೆ ಪ್ರದೇಶಗಳು ಹೀಗೆ ಅನೇಕ ಪ್ರದೇಶಗಳಲ್ಲಿರುವ ಮಲೆನಾಡು ಶೈವ ಒಕ್ಕಲಿಗರು ಅಥವಾ ವಿಭೂತಿಗೌಡ ಸಮುದಾಯದ ಕುರಿತದ್ದಾಗಿದೆ.

ಇಲ್ಲಿನ ಮೌಖಿಕ ರೂಪದ ಸಂಗತಿಗಳಿಗೆ ಶಾಸನ ಹಾಗೂ ಅಲಿಖಿತ ಕಾವ್ಯಗಳಿಂದ ಪೂರಕ ಮಾಹಿತಿಗಳನ್ನು ನೀಡಿದ್ದು ಭಿನ್ನ ಭಿನ್ನ ಭೌಗೋಳಿಕ ಪ್ರದೇಶಗಳ ಶೈವ ಒಕ್ಕಲಿಗರ ನಡುವಿನ ಆಚಾರ-ವಿಚಾರಗಳ ಭಿನ್ನತೆಯನ್ನು ತೌಲನಿಕವಾಗಿ ವಿಶ್ಲೇಷಿಸಿದ್ದಾರೆ. ಈ ಕೃತಿಯು ಕ್ಷೇತ್ರಕಾರ್ಯಧಾರಿತ ಜಾನಪದೀಯ ಅಧ್ಯಯನ ಕೃತಿಯಾಗಿದೆ. ಒಂದು ಸಮಾಜದಲ್ಲಿ ಅನೇಕ ಪಂಗಡಗಳಿರುತ್ತವೆ. ಆದರೆ ಕಾಲ ಕಾಲಕ್ಕೆ ಸಮಾಜದ ಸ್ಥಿತ್ಯಂತರದಿಂದ ಅನೇಕ ಒಳಪಂಗಡಗಳು ಹುಟ್ಟಿಕೊಳ್ಳುತ್ತವೆ. ಹೀಗೆ ಮಲೆನಾಡು ಶೈವ ಒಕ್ಕಲಿಗರು ಒಂದು ಒಳ ಪಂಗಡವಾಗಿದ್ದು ಈ ಜನಾಂಗದ ಸಮಗ್ರ ಅಧ್ಯಯನ ಇಲ್ಲ. ವಕ್ತೃ ವಿವರ ವಿಶಿಷ್ಟ ಪದಗಳ ಸೂಚಿಗಳನ್ನು ಗುರುತಿಸಿದ್ದು ಈ ಕೃತಿಯ ವೈಜ್ಞಾನಿಕ ಸ್ವರೂಪ ಪಡೆದಿರುವುದನ್ನು ಗಮನಿಸಬಹುದು. ಭಿನ್ನ ಪ್ರದೇಶಗಳ ಶೈವ ಒಕ್ಕಲಿಗರ ಆಚಾರ-ವಿಚಾರಗಳಲ್ಲಿನ ಭಿನ್ನತೆಗಳನ್ನು ತೌಲನಿಕವಾಗಿ ಚರ್ಚಿಸಿದ್ದಾರೆ.

**ಜಾನಪದ ಚಹರೆ:** ಈ ಕೃತಿಯನ್ನು 2008ರಲ್ಲಿ ಮೈಸೂರಿನ ರೂಪ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ 19 ಲೇಖನಗಳಿವೆ. ಇಲ್ಲಿ ಕೆಲವು ವಿಚಾರಸಂಕಿರಣಗಳಲ್ಲಿ ಮಂಡಿತವಾದ ಪ್ರಬಂಧಗಳಾದರೆ, ಉಳಿದವು ಜಾನಪದ ಅಧ್ಯಯನದ ಭಾಗವಾಗಿ ರೂಪುಗೊಂಡವು. ಈ ಲೇಖನಗಳು ಜಗತ್ತಿನ ಜಾನಪದ ವಸ್ತು ಸಂಗ್ರಹಾಲಯಕ್ಕೆ ಸಂಬಂಧಿಸಿದವು. ಅನೇಕ ದೇಶಗಳ ಜಾನಪದ ಅಂಶಗಳನ್ನು ಒಳಗೊಂಡಿರುವ

ಲೇಖನಗಳು, ಜಾನಪದ ಮತ್ತು ಬುಡಕಟ್ಟು ವಿಚಾರಗಳ ಲೇಖನಗಳು, ದೊಡ್ಡ ಸಮುದಾಯವಾದ ಲಿಂಗಾಯತರಲ್ಲಿ ಅನೇಕ ಉಪಪಂಗಡಗಳಿದ್ದು ಈ ಪಂಗಡಗಳು ತಮ್ಮದೇ ಆದ ಸಾಂಸ್ಕೃತಿಕ ಚಹರೆಯನ್ನು ಉಳಿಸಿಕೊಂಡಿರುವುದು ಕಂಡುಬರುತ್ತದೆ. ಇಂಥ ಉಪಪಂಗಡವಾದ ಗೌಡ ಲಿಂಗಾಯತರು, ಲಿಂಗಾಯತರ ದೇವರುಗಳು ಮತ್ತು ಪೂಜಾಚರಣೆಗಳು ಈ ಎರಡು ಲೇಖನಗಳಿಗೆ ಸಂಬಂಧಿಸಿದ ವಿಷಯವನ್ನು ಭಾನುಮತಿ ಅವರು ಕ್ಷೇತ್ರಕಾರ್ಯದ ಮೂಲಕ ವಕ್ತೃಗಳ ಮೂಲಕ ವಿಷಯ ಸಂಪಾದನೆ ಮಾಡಿ ದಾಖಲಿಸಿರುವ ಲೇಖನಗಳಾಗಿವೆ.

ಇಲ್ಲಿ ಲಿಂಗಾಯತರ ದೇವರುಗಳಲ್ಲಿ ವೈವಿಧ್ಯತೆ, ಪ್ರಾದೇಶಿಕ ಭಿನ್ನತೆಯಿದ್ದು ಇಷ್ಟ ಲಿಂಗದ ಜೊತೆ ಜೊತೆಯಲ್ಲಿಯೇ ಶಿಷ್ಟ ದೇವತೆಗಳು, ಜಾನಪದ ದೇವತೆಗಳು, ಗುರುಗಳು ಪೂಜೆಗೊಳ್ಳುವುದು ಈ ಸಮುದಾಯದ ವೈಶಿಷ್ಯ ಎಂದು ಗುರುತಿಸಿದ್ದಾರೆ. ಗೌಡ ಲಿಂಗಾಯತರು ಹಾಸನ, ಚಿಕ್ಕಮಂಗಳೂರು, ಕೊಡಗು ಜಿಲ್ಲೆಯಲ್ಲಿ ನೆಲೆಸಿದ್ದು ಹಾಸನ ಜಿಲ್ಲೆಯ ಬೇಲೂರು, ಆಲೂರು ತಾಲೂಕುಗಳಲ್ಲಿ ಗೌಡಲಿಂಗಾಯತರು ಹೆಚ್ಚಿದ್ದು , ಮಲೆನಾಡ ಭಾಗದ ಜನಸಂಖ್ಯೆಯಲ್ಲಿಯೂ ಇವರೇ ಹೆಚ್ಚು.

ಭಾನುಮತಿ ಅವರು ವ್ಯಾಪಕ ಕ್ಷೇತ್ರಕಾರ್ಯ, ತೌಲನಿಕ ಅಧ್ಯಯನ, ವಕ್ತೃಗಳನ್ನು ಗುರುತಿಸಿ ಮಾಹಿತಿ ಸಂಗ್ರಹಿಸಿರುವ ಕಾರ್ಯ, ಚಾರಿತ್ರಿಕ ಆಧಾರಗಳಾದ ಕೈಫಿಯತ್ತು, ಶಾಸನಗಳನ್ನು ಜಾನಪದ ಸಾಹಿತ್ಯ ಸಂಪಾದನೆಯಲ್ಲಿ ಆಕರಗಳಾಗಿ ಬಳಸಿಕೊಂಡಿರುವುದು ಎಲ್ಲ ಅಂಶಗಳು ಜನಪದ ಸಾಹಿತ್ಯದ ಸಂಪಾದನೆಯಲ್ಲಿ ಭಾನುಮತಿ ಅವರ ವಿಶಿಷ್ಟತೆಯನ್ನು ತೋರಿಸುತ್ತವೆ. ಜೊತೆಗೆ ಭಾನುಮತಿ ಅವರ ಕೃತಿಗಳು ಭಾಷಿಕವಾಗಿ, ಜನಾಂಗಿಕವಾಗಿ, ಸಾಹಿತ್ಯಿಕವಾಗಿ ಇತರೆ ಅಧ್ಯಯನಕ್ಕೆ ಮಾದರಿಗಳಾಗುವುದರ ಜೊತೆಗೆ ಯಾವುದೇ ಕೃತಿಯ ಕೊನೆಯಲ್ಲಿ ಆ ವಿಷಯದ ಕುರಿತು ಇನ್ನೂ ಹೆಚ್ಚಿನ, ಮುಂದುವರೆದ ಅಧ್ಯಯನ ಇರುವುದನ್ನು ಗುರುತಿಸಿರುವುದು ಗಮನಾರ್ಹವಾಗಿದೆ. ಹೀಗೆ ವೈ.ಸಿ. ಭಾನುಮತಿ ಅವರ ಗ್ರಂಥಸಂಪಾದನೆ ವಿಶಿಷ್ಟವೂ, ವಿದ್ವತ್ಪೂರ್ಣವೂ ಆಗಿದ್ದು ಗ್ರಂಥಸಂಪಾದನೆಯಲ್ಲಿ ಇವರ ವಿಧಾನಗಳು ಮಹತ್ವವೆನಿಸಿವೆ. ಹೀಗೆ ಗ್ರಂಥಸಂಪಾದಕರರಾಗಿ ಭಾನುಮತಿಯವರು ಅಗ್ರಸ್ಥಾನದಲ್ಲಿ ನಿಲ್ಲುತ್ತಾರೆ. ಗ್ರಂಥಸಂಪಾದನೆ ಎಂದ ಕೂಡಲೆ ನಮಗೆ ಅರಿವಾಗುವುದು ಪ್ರಾಚೀನ ಸಾಹಿತ್ಯ. ಅದರಲ್ಲಿ ಜಾನಪದ ಸಾಹಿತ್ಯವನ್ನು ಮರೆತೇ ಬಿಡುತ್ತೇವೆ. ಪ್ರಾಚೀನ ಸಾಹಿತ್ಯವನ್ನು ಸಂಪಾದಿಸುವುದರ ಜೊತೆಗೆ ವೈ.ಸಿ. ಭಾನುಮತಿಯವರು ಜಾನಪದ ಸಾಹಿತ್ಯಕ್ಕೆ ಅನೇಕ ಕೃತಿಗಳನ್ನು ಸಂಪಾದಿಸುವ ಮೂಲಕ ಮಹತ್ತರ ಕೊಡುಗೆಯನ್ನು ನೀಡಿದ್ದಾರೆ. ಈ ನೆಲೆಯಲ್ಲಿ ಭಾನುಮತಿಯವರು ಸಂಪಾದಿಸಿದ ಜಾನಪದ ಕೃತಿಗಳನ್ನು, ಅವುಗಳ ಸಂಪಾದನ ವಿಧಾನಗಳನ್ನು ಈ ಲೇಖನದಲ್ಲಿ ಚರ್ಚಿಸುತ್ತಾ ಗಮನಿಸಿದ ಒಂದು ಅಂಶವೆಂದರೆ ಹಸ್ತಪ್ರತಿಗಳ ರೂಪದಲ್ಲಿರುವ ಗ್ರಂಥಗಳನ್ನು ಪರಿಷ್ಕರಿಸುವುದೇ ಶ್ರಮದಾಯಕವಾಗಿರುವುವಾಗ ಇನ್ನು ಕ್ಷೇತ್ರಕಾರ್ಯ ಮಾಡಿ ಮೌಖಿಕ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಿರುವುದು ಇವರ ಶ್ರದ್ಧೆ, ತಾಳ್ಮೆ, ಕಠಿಣ ಪರಿಶ್ರಮಕ್ಕೆ ಹಿಡಿದ ಕನ್ನಡಿಯಾಗಿದೆ. ಇಂತಹ ಅಪರೂಪದ ಗ್ರಂಥಸಂಪಾದಕರಿಂದ ಇನ್ನಷ್ಟು ಜಾನಪದ ಸಾಹಿತ್ಯಿಕ ಕೃತಿಗಳು ಸಂಪಾದನೆಗೊಂಡು ಪ್ರಕಟವಾದರೆ ಜನಪದ ಸಾಹಿತ್ಯ ಲೋಕ ಮತ್ತಷ್ಟು

ಬಲಗೊಳ್ಳುತ್ತದೆ.

## ಅಡಿ ಟಿಪ್ಪಣಿಗಳು:

1. ಮೀನಾ. ಗ್ರಂಥ ಸಂಪಾದನೆಯಲ್ಲಿ ವಿಶಿಷ್ಠ ಹೆಸರು ಡಾ.ವೈ.ಸಿ.ಭಾನುಮತಿ. ಭೂಮಾತು ಪತ್ರಿಕೆ. 2018. ಸಂಪುಟ-2. ಸಂಚಿಕೆ-11. ಪುಟ-9
2. ಅದೇ ಪುಟ-9.

## ಪರಾಮರ್ಶನ ಗ್ರಂಥಗಳು:


1. ಭಾನುಮತಿ ವೈ.ಸಿ. (1989). ಇಬ್ಬೀಡಿನ ಜನಪದ ಕಥೆಗಳು. ಕೇಶವ ಪ್ರಕಾಶನ. ಮೈಸೂರು.
2. ಭಾನುಮತಿ ವೈ.ಸಿ. (1994). ಮಲೆನಾಡು ಶೈವ ಒಕ್ಕಲಿಗರು ಜಾನಪದೀಯ ಅಧ್ಯಯನ. ಕೇಶವ ಪ್ರಕಾಶನ. ಮೈಸೂರು.
3. ಭಾನುಮತಿ ವೈ.ಸಿ. (2008). ಜಾನಪದ ಚಹರೆ. ರೂಪ ಪ್ರಕಾಶನ. ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.